ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ದಾವಣಗೆರೆ ಪ್ರಾದೇಶಿಕ ವಿಭಾಗ, ದಾವಣಗೆರೆ – 577 005.

ದೂರವಾಣಿ ಸಂಖ್ಯೆ : 08192-262527
ಫ್ಯಾಕ್ಸ್ ನಂ. : 08192-262527 ಇ-ಮೇಲ್ : dcfdvg@gmail.com

ಸಂಖ್ಯೆ: : ಬಿ4/ಲ್ಯಾಂಡ್/ಎಫ್‌ಸಿ/ಸಿಆರ್– /2019–20 ದಿನಾಂಕ : 15–10–2020

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಬಳ್ಳಾರಿ ವೃತ್ತ,
ಬಳ್ಳಾರಿ–ಇವರಿಗೆ.

ಮಾನ್ಯರೇ,

ವಿಷಯ: Diversion of 10.0956 hectare of forest land in Sy.No. 1/A and 1/D of Uchangidurga village, Arasikere Hobli, Harapanahalli Taluk, Davanagere district for establishing M-Sand Quarry and its approach road in favour of M/s Annapurna Stone Crusher [a partnership firm of Sri T. Basappa S/o T. Siddappa, Smt. M.C. Poornima W/o Sri T. Basappa and Sri B. Nikhil S/o Sri T. Basappa, # 1120, 3rd Cross, Taralabalu Extension, Davanagere] Sy.No. 1/D, Uchangidurga village, Harapanahalli Taluk, Davanagere District-reg.

ಉಲ್ಲೇಖ: ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು ರವರು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಬೆಂಗಳೂರು ಇವರಿಗೆ ವಿಳಾಸಿಸಿದ ಪತ್ರ ಸಂಖ್ಯೆ: ಅಪಜೀ/41/ ಎಫ್‌ಎಫ್‌ಎಂ/2020ಇ, ದಿನಾಂಕ :18–09–2020.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಟಿ. ಬಸಪ್ಪ ಬಿನ್ ಟಿ. ಸಿದ್ದಪ್ಪ, ಅನ್ನಪೂರ್ಣ ಸ್ಟೋನ್ ಕ್ರಷರ್ಸ್, ದಾವಣಗೆರೆ ಇವರಿಗೆ ಹರಪನಹಳ್ಳಿ ತಾಲ್ಲೂಕು ಉಚ್ಚಂಗೀದುರ್ಗ ಮೀಸಲು ಅರಣ್ಯ ಪ್ರದೇಶದ ಉಚ್ಚಂಗೀದುರ್ಗ ಗ್ರಾಮದ ಸ.ನಂ.1ಎ ಮತ್ತು 1ಡಿ ರ ವಿಸ್ತೀರ್ಣ 10.0956 ಹೆ.ನಲ್ಲಿ ಎಂ.ಸ್ಯಾಂಡ್, ಕಲ್ಲುಕ್ವಾರಿ ಮತ್ತು ಕೂಡು ರಸ್ತೆಗಾಗಿ ಅರಣ್ಯ ಪ್ರದೇಶವನ್ನು ಅರಣ್ಯ ಸಂರಕ್ಷಣಾ ಕಾಯ್ದೆ–1980, ಸೆಕ್ಷನ್–2ರ ಪ್ರಕಾರ ಬಿಡುಗಡೆಗೊಳಿಸುವ ಸಂಬಂಧ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿ, ಆ ಆಕ್ಷೇಪಣೆಗಳಿಗೆ ಮಾಹಿತಿಯನ್ನು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸುವಂತೆ ಉಲ್ಲೇಖಿತ ಪತ್ರದಲ್ಲಿ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು ರವರು ನಿರ್ದೇಶಿಸಿರುವರು. ವಿವರಗಳು ಈ ಕೆಳಗಿನಂತಿರುತ್ತವೆ.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| 1 | ಸದರಿ ಪ್ರಸ್ತಾವನೆಯಲ್ಲಿ ಗಣಿಗುತ್ತಿಗೆಯು ದಿನಾಂಕ : 24–11–2020ರವರೆಗೆ ಮಾತ್ರವೇ ಇದ್ದು, 10 ವರ್ಷಗಳ ಗುತ್ತಿಗೆ ಅವಧಿಗೆ ಯಾವ ಆಧಾರದ ಮೇಲೆ ಶಿಫಾರಸ್ಸು ಮಾಡಲಾಗಿದೆ. | ಪ್ರಸ್ತಾಪಿತ ಗಣಿಗುತ್ತಿಗೆ/ಕ್ರಷರ್ ಲೈಸನ್ಸ್‌ನ ಅವಧಿಯು ದಿನಾಂಕ : 25–02–2025 ರವರೆಗೆ ಇರುತ್ತದೆ. ಗಣಿಗುತ್ತಿಗೆ/ಕ್ರಷರ್ ಲೈಸನ್ಸ್‌ನ್ನು ಪ್ರತಿ 5 ವರ್ಷಕ್ಕೆ ಒಂದು ಸಾರಿಯಂತೆ ಮಾನ್ಯ ಜಿಲ್ಲಾಧಿಕಾರಿ, ಬಳ್ಳಾರಿ ಜಿಲ್ಲೆ, ಬಳ್ಳಾರಿ ಇವರಿಂದ ನವೀಕರಣಗೊಳಿಸಲಾಗುತ್ತಿದೆ. ಸದರಿ ಪರವಾನಿಗೆಯನ್ನು ಈ ಪತ್ರಕ್ಕೆ ಲಗತ್ತಿಸಿ ಸಲ್ಲಿಸಿದೆ. |

.....2

| | | |
|---|---|---|
| 2 | ಉಚ್ಚಂಗೀದುರ್ಗ ಗ್ರಾಮದ ಸ.ನಂ. 1ಎ ಜಮೀನಿನಲ್ಲಿ ನಡೆಸಲು ಉದ್ದೇಶಿಸಿರುವ ಚಟುವಟಿಕೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ, ದಾವಣಗೆರೆ ರವರು ನೀಡಿರುವ ಲೈಸನ್ಸ್‌ನ ಪ್ರತಿ ಒದಗಿಸುವುದು. | ಉಚ್ಚಂಗೀದುರ್ಗ ಗ್ರಾಮದ ಸ.ನಂ.1ಎರ ಪ್ರದೇಶವು ಉಚ್ಚಂಗೀದುರ್ಗ ಮೀಸಲು ಅರಣ್ಯ ಪ್ರದೇಶವಾಗಿರುವುದರಿಂದ ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡಯುವಂತೆ ಮಾನ್ಯ ಜಿಲ್ಲಾಧಿಕಾರಿ, ದಾವಣಗೆರೆ ಜಿಲ್ಲೆ ಇವರ ಪತ್ರ ಸಂಖ್ಯೆ ಎಲ್‌ಎನ್‌ಡಿ/ಸಿಆರ್/328/2017–18, ದಿನಾಂಕ : 20–12–2017 ರಲ್ಲಿ ಅರ್ಜಿದಾರರಿಗೆ ಹಿಂಬರಹವನ್ನು ನೀಡಿರುತ್ತಾರೆ. ಉಚ್ಚಂಗೀದುರ್ಗ ಗ್ರಾಮದ ಸ.ನಂ.1ಎರ ಪ್ರದೇಶವು ಅರಣ್ಯ ಪ್ರದೇಶವಾಗಿದ್ದು, ಎನ್‌ಓಸಿಯನ್ನು ನೀಡಲು ಅವಕಾಶವಿರುವುದಿಲ್ಲ. ಅರಣ್ಯೇತರ ಪ್ರದೇಶಗಳಿಗೆ ಮಾತ್ರ ಅರಣ್ಯ ಇಲಾಖೆಯಿಂದ ಎನ್‌ಓಸಿಯನ್ನು ನೀಡಲಾಗುವುದು. ಸದರಿ ಪತ್ರವನ್ನು ಈ ಪತ್ರಕ್ಕೆ ಲಗತ್ತಿಸಿ ಸಲ್ಲಿಸಿದೆ. |
| 3 | ಹರಪನಹಳ್ಳಿ ತಾಲ್ಲೂಕನ್ನು ಬಳ್ಳಾರಿ ಜಿಲ್ಲೆಯ ವ್ಯಾಪ್ತಿಗೆ ಸೇರಿಸಲಾಗಿದ್ದರೂ ಸಹ ಪ್ರಸ್ತಾವನೆಯಲ್ಲಿ ದಾವಣಗೆರೆ ಜಿಲ್ಲೆ ಎಂದು ತೋರಿಸಿರುವ ಬಗ್ಗೆಯೂ ಸಹ ಸ್ಪಷ್ಟೀಕರಣ ನೀಡುವುದು. | ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ/ 139/Bhudapu/2013, ಬೆಂಗಳೂರು, ದಿನಾಂಕ : 21–07–2018ರ ಆದೇಶದನ್ವಯ ಹರಪನಹಳ್ಳಿ ತಾಲ್ಲೂಕನ್ನು ಬಳ್ಳಾರಿ ಜಿಲ್ಲೆಗೆ ಸೇರಿಸಲಾಗಿದೆ. ಕಾರಣ ದಾವಣಗೆರೆ ಜಿಲ್ಲೆ ಬದಲಿಗೆ ಬಳ್ಳಾರಿ ಜಿಲ್ಲೆಯೆಂದು ಓದಿಕೊಳ್ಳುವುದು. ಆದರೆ ಹರಪನಹಳ್ಳಿ ವ್ಯಾಪ್ತಿಯಲ್ಲಿನ ಅರಣ್ಯ ಪ್ರದೇಶವು ದಾವಣಗೆರೆ ಪ್ರಾದೇಶಿಕ ಅರಣ್ಯ ವಿಭಾಗಕ್ಕೆ ಸೇರಿರುತ್ತದೆ. |

ತಮ್ಮ ನಂಬುಗೆಯ,

*ಸಹಿ/–*

ಉಪ ಅರಣ್ಯ ಸಂರಕ್ಷಣಾಧಿಕಾರಿ,
ದಾವಣಗೆರೆ ವಿಭಾಗ, ದಾವಣಗೆರೆ.

ಪ್ರತಿಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ [ಅರಣ್ಯ ಸಂರಕ್ಷಣೆ], ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ದಾವಣಗೆರೆ ವಿಭಾಗ, ದಾವಣಗೆರೆ.